KACB200008732023

# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಾಗೇಪಲ್ಲಿ.

ದಿನಾಂಕ 09 ನೇ ಮಾಹೆ ಜುಲೈ 2026

ಉಪಸ್ಥಿತರು

**ಶ್ರೀಮತಿ. ರಂಜಿತ. ಎಸ್.,** ಎಂ.ಎಸ್.ಡಬ್ಲ್ಯೂ. ಎಲ್.ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.

**<u>ಸಿ.ಸಿ ಸಂಖ್ಯೆ: 485 / 2023</u>**

ಫಿರ್ಯಾದುದಾರರು : ಸರ್ಕಾರದ ಪರವಾಗಿ,
ಬಾಗೇಪಲ್ಲಿ ಆರಕ್ಷಕ ಠಾಣೆ
(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

- *ವಿರುದ್ಧ* -

ಆರೋಪಿರುಃ

2. ಶ್ರೀ. ಶಿವಪ್ಪ
ಬಿನ್ ಲೇಟ್ ಹನುಮಂತಪ್ಪ
@ ಚಿನ್ನಪ್ಪಯ್ಯ
ವಯಸ್ಸು 35 ವರ್ಷ,

3. ಶ್ರೀ. ಅಂಜಿನಪ್ಪ
ಬಿನ್ ಹನುಮಂತಪ್ಪ @ ಚಿನ್ನಪ್ಪಯ್ಯ
ವಯಸ್ಸು 42 ವರ್ಷ,

4. ಶ್ರೀಮತಿ. ಅಂಜಿನಮ್ಮ
ಕೋಂ. ಅಂಜಿನಪ್ಪ
ವಯಸ್ಸು 35 ವರ್ಷ,

ಎಲ್ಲರ ವಾಸಃ ಅಭಕವಾರಿಪಲ್ಲಿ ಗ್ರಾಮ,
ಬಾಗೇಪಲ್ಲಿ ತಾಲ್ಲೂಕು,
ಚಿಕ್ಕಬಳ್ಳಾಪುರ ಜಿಲ್ಲೆ.

(ಪ್ರತಿನಿಧಿಸುವವರು **ಶ್ರೀ. ಎ.ಎಮ್.ಎನ್.,** ವಕೀಲರು)

| | | |
|---|---|---|
| ಅಪರಾಧ ನಡೆದ ದಿನಾಂಕ | : | 14.02.2023 |
| ಅಪರಾಧ ವರದಿಯಾದ ದಿನಾಂಕ | : | 14.02.2023 |
| ಫಿರ್ಯಾದುದಾರರ ಹೆಸರು | : | ಶ್ರೀ. ಶಿವಪ್ಪ |
| ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | : | 02.07.2026 |
| ತಿರ್ಪಿನ ದಿನಾಂಕ | : | 09.07.2026 |
| ಆರೋಪಿಸಲಾದ ದಂಡನೀಯ ಅಪರಾಧ | : | ಭಾರತೀಯ ದಂಡ ಸಂಹಿತೆ, ಕಲಂ 323, 324, 325, 448, 504 ಮತ್ತು ಸಹವಾಚಕ ಕಲಂ 34. |
| ನ್ಯಾಯಾಧೀಶರ ಅಭಿಪ್ರಾಯ | : | ಭಾರತೀಯ ದಂಡ ಸಂಹಿತೆ, ಕಲಂ 323, 324, 325, 448, 504 ಮತ್ತು ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧಗಳ ಆರೋಪಗಳಿಂದ ಆರೋಪಿತರನ್ನು ದೋಷ ಮುಕ್ತಗೊಳಿಸಿ ನಿರ್ದೋಷಿಗಳೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ. |
| ಸರ್ಕಾರದ ಪರವಾಗಿ | : | ಸಹಾಯಕ ಸರ್ಕಾರಿ ಅಭಿಯೋಜಕರು, ಬಾಗೇಪಲ್ಲಿ |
| ಆರೋಪಿತರ ಪರವಾಗಿ | : | ಶ್ರೀ. ಶ್ರೀ. ಎ.ಎಮ್.ಎನ್., ವಕೀಲರು |
| ತೀರ್ಪು ನೀಡಲು ತೆಗೆದುಕೊಂಡ ಒಟ್ಟು ಅವಧಿ | : | ವರ್ಷಗಳು 03 ತಿಂಗಳು 04 ದಿನಗಳು 25 |

**: ತೀರ್ಪು :**

ದಿನಾಂಕ 14.02.2023 ರಂದು ಸಂಜೆ 6-30 ಗಂಟೆಗೆ ಫಿರ್ಯಾದದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಆರೋಪಿತರ ವಿರುದ್ದ ಠಾಣಾ ಮೊ.ಸಂಖ್ಯೆ 37/2023 ರಂತೆ ಭಾರತೀಯ ದಂಡ ಸಂಹಿತೆ, ಕಲಂ 323, 324, 325, 448, 504 ಮತ್ತು ಸಹವಾಚಕ ಕಲಂ 34 ಅಡಿಯಲ್ಲಿನ ಆರೋಪಗಳಿಗೆ ಪ್ರಕರಣವನ್ನು ನೊಂದಾಯಿಸಿಕೊಳ್ಳಲಾಗಿರುತ್ತದೆ.

**2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆ:**

ದಿನಾಂಕ 14.02.2023 ರಂದು ಬಾಗೇಪಲ್ಲಿ ಪೊಲೀಸ್ ಠಾಣೆಯ ವ್ಯಾಪ್ತಿಯ ಬಾಗೇಪಲ್ಲಿ ತಾಲ್ಲೂಕಿನ ಅಭಕವಾರಿಪಲ್ಲಿ ಗ್ರಾಮದ ವಾಸಿ ಚಾಸಾ-1

ರವರ ವಾಸದ ಮನೆಯ ಮುಂದೆ ಸಂಜೆ 5.00 ಗಂಟೆಯ ಸಮಯದಲ್ಲಿ ಚಾಸಾ-1 ರವರು ಮಲಗಿಕೊಂಡಿದ್ದಾಗ, ಜೆ1 (ಕಾನೂನು ಸಂಘರ್ಷಕ್ಕೊಳಗಾದ ಬಾಲಕ) ಮತ್ತು 2 ರಿಂದ 4ನೇ ಆರೋಪಿಗಳು ಸಮಾನ ಉದ್ದೇಶದಿಂದ ಅಕ್ರಮವಾಗಿ ಚಾಸಾ-1, ರವರ ಮನೆಯ ಒಳಗೆ ಪ್ರವೇಶ ಮಾಡಿ ಉಂಡಾಡ ನಾ ಕೊಡಕ ಅಂಜಿಗಾ ಎಂದು ಕೆಟ್ಟದಾಗಿ ಬೈಯುತ್ತಾ, ಬೋಳಿ ನನ್ನ ಮಗನೆ ಲೋಫರ್ ನನ್ನ ಮಗನೇ ಮದ್ಯಾಹ್ನ ನಮ್ಮ ಜಮೀನಿನೊಳಗೆ ಬಂದು ನಮ್ಮ ಮೇಲೆ ಗಲಾಟೆ ಮಾಡುತ್ತಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು 2ನೇ ಆರೋಪಿಯು ತಾನು ತಂದಿದ್ದ ಕುಡುಗೋಲಿನಿಂದ ಚಾಸಾ-1 ರವರ ಹಣೆಯ ಬಲಭಾಗಕ್ಕೆ ಹೊಡೆದು ಸಾಧಾರಣಾ ಸ್ವರೂಪದ ಸೀಳು ಗಾಯವನ್ನುಂಟು ಮಾಡಿದ್ದು, ಜೆ-1 ತಂದಿದ್ದ ಕಬ್ಬಿಣದ ರಾಡ್ ನಿಂದ ಚಾಸಾ-1 ರವರ ಎಡ ಕಾಲಿಗೆ ಬೆನ್ನಿನ ಮೇಲೆ ಹೊಡೆದು ಗಾಯವನ್ನುಂಟು ಮಾಡಿರುತ್ತಾರೆ. 3ನೇ ಆರೋಪಿಯು ಎಡಕಾಲಿನ ತೊಡೆಯ ಬಳಿ ಮತ್ತು ಬಲಕಾಲಿನ ಮೇಲೆ ಹಲ್ಲಿನಿಂದ ಕಚ್ಚಿ ಊತ ಗಾಯವನ್ನುಂಟು ಮಾಡಿದ್ದು, 4ನೇ ಆರೋಪಿಯು ಕೈ-ಗಳಿಂದ ಮೈಮೇಲೆ ಹೊಡೆದು ನೋವುಂಟು ಮಾಡಿ ಸಾಧಾರಣಾ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ, ಕಲಂ 323, 324, 325, 448, 504 ಮತ್ತು ಸಹವಾಚಕ ಕಲಂ 34 ಅಡಿಯಲ್ಲಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

**3.** ಈ ನ್ಯಾಯಾಲಯವು ಘಟನೆ ನಡೆಯಿತೆನ್ನಲಾದ ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದು ಕೊಂಡು, 2 ರಿಂದ 4ನೇ ಆರೋಪಿತರಿಗೆ ನ್ಯಾಯಾಲಯದ ಹಾಜರಾತಿಗಾಗಿ ಸಮನ್ಸನ್ನು ಹೊರಡಿಸಿರುತ್ತದೆ. ಆರೋಪಿತರು ದಿನಾಂಕ 15.03.2023 ರಂದು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನನ್ನು ಪಡೆದು ಕೊಂಡಿರುತ್ತಾರೆ. ಆರೋಪಿತರಿಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 207ರ ರೀತಿ ಅಗತ್ಯಪಡಿಸಿರುವಂತೆ ದೋಷಾರೋಪಣೆ

ಪಟ್ಟಿ ಹಾಗೂ ಯುಕ್ತ ದಾಖಲೆಗಳ ನಕಲುಗಳನ್ನು ಒದಗಿಸಲಾಗಿದೆ. ಭಾರತೀಯ ದಂಡ ಸಂಹಿತೆ, ಕಲಂ 448, 504, 323, 324 ಮತ್ತು ಸಹವಾಚಕ ಕಲಂ 34 ರ ಆರೋಪಗಳಿಗಾಗಿ ಆರೋಪಿತರ ವಿರುದ್ಧದ ದೋಷಾರೋಪಣೆಯನ್ನು ತಯಾರಿಸಿ, ಓದಿ, ವಿವರಿಸಲಾಗಿ ಆರೋಪಿತರು ತನ್ನ ವಿರುದ್ಧದ ಆರೋಪಗಳನ್ನು ಅಲ್ಲಗಳೆದದ್ದು, ಸದರಿ ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು. ಭಾರತೀಯ ದಂಡ ಸಂಹಿತೆ ಕಲಂ 325 ರನ್ವಯ ದೋಷಾರೋಪಣೆಯನ್ನು ರಚಿಸಲು ಸಾಕಷ್ಟು ಅಂಶಗಳು ಕಂಡುಬರದೆ ಇರುವ ಕಾರಣ ಸದರಿ ಕಲಂನ್ವಯ ದೋಷಾರೋಪಣೆಯನ್ನು ರಚಿಸಲು ಕೈಬಿಡಲಾಗಿದೆ.

**4.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಬೆಂಬಲಿಸಿ, ಫಿರ್ಯಾದಿದಾರರು ಚಾ.ಸಾ.1 ರವರನ್ನು ಅ.ಸಾ.1 ರವರನ್ನಾಗಿ ವಿಚಾರಣೆಗೆ ಒಳಪಡಿಸಿಕೊಂಡು ನಿಪಿ.1 ಮತ್ತು ನಿಪಿ.2 ದಾಖಲೆಗಳನ್ನು ಗುರ್ತಿಸಿ ಕೊಂಡಿರುತ್ತಾರೆ. ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿಯಾದ ಅ.ಸಾ.1 ರವರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ, ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಿ ಎನ್ನುವ ಅಭಿಯೋಜನೆಯವರ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ. ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆಯಲ್ಲಿ ಆರೋಪಿತರ ಹಿತಾಸಕ್ತಿಗೆ ವಿರುದ್ಧವಾದ ಅಂಶಗಳು ಇರದಿದ್ದ ಕಾರಣ ಅವರನ್ನು ಅಪರಾಧಿಕ ಸಂಹಿತೆ ಕಲಂ. 313 ರಡಿಯಲ್ಲಿ ಪ್ರಶ್ನಿಸಿ ಹೇಳಿಕೆಯನ್ನು ದಾಖಲಿಸುವ ಹಂತವನ್ನು ಕೈಬಿಡಲಾಗಿದೆ.

**5.** ಉಭಯತ್ರರ ವಾದವನ್ನು ಆಲಿಸಿ ಕಡತವನ್ನು ನೋಡಲಾಗಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಬಂದಿರುತ್ತವೆ.

**ಅಂಶಗಳು**

**ಅಂಶ-1 :** ದಿನಾಂಕ 14.02.2023 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಬಾಗೇಪಲ್ಲಿ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಅಭಕವಾರಿಪಲ್ಲಿ ಗ್ರಾಮದ ವಾಸಿ ಚಾಸಾ-1 ರವರ ವಾಸದ ಮನೆಯ ಮುಂದೆ ಚಾಸಾ-1 ರವರು ಮಲಗಿ ಕೊಂಡಿದ್ದಾಗ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ರವರ ಮನೆಯೊಳಕ್ಕೆ ಅಕ್ರಮ ಪ್ರವೇಶ ಮಾಡಿದ್ದು, ಆ ಪ್ರಕಾರ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 448 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-2:** ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ರವರ ಮನೆಯಾಳಕ್ಕೆ ಅಕ್ರಮ ಪ್ರವೇಶ ಮಾಡಿ, ಉಂಡಾಡ ನಾ ಕೊಡಕ ಅಂಜಿಗಾ ಎಂದು ಕೆಟ್ಟದಾಗಿ ಬೈಯುತ್ತಾ ಬೋಳಿ ಮಗನೇ ಲೋಫರ್ ನನ್ನ ಮಗನೇ ಮದ್ಯಾಹ್ನ ನಮ್ಮ ಜಮೀನಿನೊಳಗೆ ಬಂದು ನಮ್ಮ ಮೇಲೆ ಗಲಾಟೆ ಮಾಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ, ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-3:** ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ವಿಧಿವಿರುದ್ಧದ ಕೂಟದ ಸದಸ್ಯರಾಗಿ,

ಚಾಸಾ 1, 2 ಮತ್ತು 3 ರವರು ತಮ್ಮ ಮನೆಯಲ್ಲಿದ್ದಾಗ, 3ನೇ ಆರೋಪಿಯು ಚಾಸಾ-1 ರವರ ಎಡಕಾಲಿನ ತೊಡೆಯ ಬಳಿ ಮತ್ತು ಬಲಕಾಲಿನ ಮೇಲೆ ಹಲ್ಲಿನಿಂದ ಕಚ್ಚಿ ಊತ ಗಾಯವನ್ನುಂಟು ಮಾಡಿದ್ದು, ಮತ್ತು 4ನೇ ಆರೋಪಿಯು ಚಾಸಾ.1 ರವರನ್ನು ಕೈಗಳಿಂದ ಮೈ ಮೇಲೆ ಹೊಡೆದು ನೋವುಂಟು ಮಾಡಿ ಸಾಧಾರಣಾ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು ಆ ಪ್ರಕಾರ ಆರೋಪಿಗಳು ಭಾರತೀಯ ದಂಡ ಸಂಹಿತೆ, ಕಲಂ 323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-4:** ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ 2ನೇ ಆರೋಪಿಯು ಕುಡುಗೋಲಿನಿಂದ ಚಾಸಾ-1 ರವರ ಹಣೆಯ ಬಲಭಾಗಕ್ಕೆ ಹೊಡೆದು ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-5:** ಹಾಗಿದ್ದರೆ ಏನು ಆದೇಶ ?

**6.** ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನಂತೆ ಇದೆಃ

| | | |
|---|---|---|
| ಅಂಶ 1 | - | ನಕಾರಾತ್ಮಕವಾಗಿ |
| ಅಂಶ 2 | - | ನಕಾರಾತ್ಮಕವಾಗಿ |
| ಅಂಶ 3 | - | ನಕಾರಾತ್ಮಕವಾಗಿ |
| ಅಂಶ 4 | - | ನಕಾರಾತ್ಮಕವಾಗಿ |

ಅಂಶ 5 - ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

## : ಕಾರಣಗಳು :

**7.** **ಅಂಶ ಸಂಖ್ಯೆ 1 ರಿಂದ 4** ಅಭಿಯೋಜನೆಯ ಸಂಕ್ಷಿಪ್ತ ಪ್ರಕರಣದ ಸಾರಾಂಶವನ್ನು ಈಗಾಗಲೇ ಖಂಡಿಕೆ-2 ರಲ್ಲಿ ಹೇಳಲಾಗಿದ್ದು, ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಾದ ಅ.ಸಾ.1 ರವರು ಪ್ರಥಮ ವರ್ತಮಾನ ಹೇಳಿಕೆ ನೀಡಿದ ಗಾಯಾಳು ಸಾಕ್ಷಿದಾರರಾಗಿರುತ್ತಾರೆ. ಅಭಿಯೋಜನೆಯು ತಮ್ಮ ಪ್ರಕರಣವನ್ನು ಸಾಬೀತು ಪಡಿಸುವಲ್ಲಿ ಈ ಮೇಲ್ಕಂಡ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿದ್ದಾರೆ.

**8.** ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಲ್ಲಿ ಫಿರ್ಯಾದಿ ಸಾಕ್ಷಿ ಅ.ಸಾ.1 ಅಂಜಿನಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ನ್ಯಾಯಾಲಯದ ಮುಂದಿರು ಆರೋಪಿತರು ನನ್ನ ಸಂಬಂಧಿಕರು ಆರೋಪಿಗಳು ಯಾವತ್ತೂ ನನಗೆ ಕೈಗಳಿಂದ ಅಥವಾ ಕುಡಿಗೋಲಿನಿಂದಾಗಲೀ ಮತ್ತು ರಾಡಿನಿಂದಾಗಾಲೀ ಹೊಡೆದು ಹಲ್ಲೆ ಮಾಡಿರುವುದಿಲ್ಲ. ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಯಾವುದೇ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ. ಈಗ್ಗೆ ಸುಮಾರು 3 ವರ್ಷಗಳ ಹಿಂದೆ ಆನಾರೋಗ್ಯದ ಕಾರಣ ಆಸ್ಪತ್ರೆಗೆ ಹೋಗಿದ್ದು ಪೋಲೀಸರು ನನ್ನಿಂದ ಕೆಲವೊಂದು ದಾಖಲೆಗಳಿಗೆ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿದಾರರು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಿದ್ದು, ಹಾಗೂ ಈಗ್ಗೆ ಸುಮಾರು 3 ವರ್ಷಗಳ ಹಿಂದೆ ನನ್ನ ಸ್ವಂತ ಕೆಲಸದ ಮೇರೆಗೆ ಪೋಲೀಸ್ ಠಾಣೆಗೆ ಹೋಗಿದ್ದಾಗ ಪೋಲೀಸರ ಕೋರಿಕೆಯ ಮೇರೆಗೆ ಒಂದು ಸಹಿ ಹಾಕಿರುತ್ತೇನೆ. ಚಾಸಾ-1 ರವರು ಕೃತ್ಯ ನಡೆದ

ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಿದ್ದು, ಆ ಸಹಿಗಳನ್ನು ಯಾವ ವಿಚಾರಕ್ಕೆ ಹಾಕಿರುತ್ತೇನೆಂದು ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**9.** ಈ ಮೇಲೆ ಹೇಳಿದ ಮೌಖಿಕ ಸಾಕ್ಷ್ಯಕ್ಕೆ ಬೆಂಬಲವಾಗಿ, ಅಭಿಯೋಜನೆಯವರು ಅಸಾ.1 ರವರು ನೀಡಿದ ದೂರನ್ನು ನಿಪಿ.1 ಎಂದು, ನಿಪಿ.1(ಎ) ರಲ್ಲಿರುವ ಸಹಿಯು ಚಾಸಾ-1 ರವರ ಸಹಿಯಾಗಿದ್ದು, ಮತ್ತು ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನಿಪಿ.2 ಎಂದು ಹಾಗೂ ನಿಪಿ.2(ಎ) ರಲ್ಲಿರುವ ಸಹಿಯನ್ನು ಚಾಸಾ-1 ರವರ ಸಹಿ ಎಂದು ಗುರ್ತಿಸಿಕೊಂಡಿರುತ್ತಾರೆ.

**10.** ಅಭಿಯೋಜನೆಯು ಪ್ರಾ.ಸಾ.1 ರವರನ್ನು ಪಾಟೀ ಸವಾಲುಗೊಳಿಸಿದರೂ ಸದರಿ ಸಾಕ್ಷಿದಾರರಿಂದ ಅಭಿಯೋಜನೆಯನ್ನು ಬೆಂಬಲಿಸುವಂತಹ ಯಾವುದೇ ಸಾಕ್ಷ್ಯ ಹೇಳಿಕೆಗಳನ್ನು ಹೊರತೆಗೆಯಲಾಗಲಿಲ್ಲ. ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿದಾರರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಪಟ್ಟಂತೆ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಸಾಕ್ಷ್ಯದ ಅವಲೋಕನ ಮಾಡಿ ನೋಡಿದಾಗ ಅಭಿಯೋಜನೆ ಪ್ರಕರಣದ ಬಗ್ಗೆ ಬೆಳಕು ಚೆಲ್ಲಬಹುದಾಗಿದ್ದ ಪ್ರಾ.ಸಾ.1 ರವರು ಅಭಿಯೋಜನೆಯನ್ನು ಬೆಂಬಲಿಸದೇ ಪ್ರತಿಕೂಲ ಹೊಂದಿದ್ದು, ಅಭಿಯೋಜನೆಗೆ ಆಘಾತಕಾರಿ ಆಗಿರುತ್ತದೆ. ಆದುದರಿಂದ ಅಭಿಯೋಜನೆಯವರು ಹೇಳುವಂತಹ ಘಟನೆ ನಡೆದಿರುವ ಸಾಧ್ಯತೆ ಇದೆ ಎಂದು

ತೋರಿಸಲು ಅಭಿಯೋಜನೆ ವಿಪಲ್ಲಿವಾಗಿದೆ. ಆದ್ದರಿಂದ 2 ರಿಂದ 4ನೇ ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ಸಂಶಯಾತೀತವಾಗಿ ಸಾಭೀತುಪಡಿಸುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆಂದು ನಿರ್ಣಯಿಸಿ, ನ್ಯಾಯಾಲಯದ ನಿರ್ಣಯಕ್ಕೆ ಬಂದ ಅಂಶ 1 ರಿಂದ 4 ನ್ನು **ನಕಾರಾತ್ಮಕವಾಗಿ** ಉತ್ತರಿಸಿದೆ.

**11.** **<u>ಅಂಶ ಸಂಖ್ಯೆ-5:</u>** ಮೇಲ್ಕಂಡ ಚರ್ಚೆಯಲ್ಲಿ ಅಂಶ-1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತಸಿರುವುದರಿಂದ 2 ರಿಂದ 4ನೇ ಆರೋಪಿತರು ಸಂಶಯದ ಲಾಭ ಹೊಂದಿ ಬಿಡುಗಡೆಗೆ ಅರ್ಹರಾಗಿದ್ದು, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

## ಆದೇಶ

ಅಪರಾಧಿಕ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಪ್ರಕರಣದ 2 ರಿಂದ 4ನೇ ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ, ಕಲಂ 448, 504, 323, 324 ಮತ್ತು ಸಹವಾಚಕ ಕಲಂ 34 ರಡಿಯಲ್ಲಿನ ಆರೋಪಗಳಿಂದ 2 ರಿಂದ 4ನೇ ಆರೋಪಿತರನ್ನು ನಿರ್ದೋಷಿಗಳು ಎಂದು ತೀರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿಗಳು ಮತ್ತು ಅವರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನಿನ ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮಾಲುಪಟ್ಟಿ ಸಂಖ್ಯೆ:- 31/2023 ದಿನಾಂಕ 15.02.2023 ರಲ್ಲಿ ನಮೂದಿಸಿರುವ ಸುಮಾರು 2 ಅಡಿ ಉದ್ದದ ಸ್ಟೀಲ್ ರಾಡ್ ಮತ್ತು ಒಂದು ಕುಡುಗೋಲು ಇವುಗಳು ಯಾವುದೇ ಬೆಲೆ ಬಾಳದ ವಸ್ತುವಾಗಿದ್ದರಿಂದ

ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.

(ಶೀಘ್ರಲಿಪಿಗಾರಿಗೆ ಗಣಕಯಂತ್ರದಲ್ಲಿ ನೇರವಾಗಿ ಉಕ್ತಲೇಖನ ಕೊಟ್ಟಿದ್ದು, ಅವರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ 09ನೇ ಜುಲೈ 2026 ರಂದು ತೆರೆದು ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

**ಸಹಿ/-**
**( ಶ್ರೀಮತಿ. ರಂಜಿತ. ಎಸ್)**
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.

**: ಅನುಬಂಧ :**

**1) ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ :**

ಪ್ರಾಸಾ.1 : ಅಂಜಿನಪ್ಪ

**2) ಅಭಿಯೋಜನೆ ಪರ ಗುತಿರ್ಸಿದ ದಾಖಲಾತಿಗಳು :**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಚಾಸಾ-1 ರವರ ಸಹಿ |
| ನಿಪಿ-2 | : | ಪಂಚನಾಮೆ |
| ನಿಪಿ-2(ಎ) | : | ಚಾಸಾ-1 ರವರ ಸಹಿ |

**3) ಆರೋಪಿತರ ಪರ ಯಾವುದೇ ಸಾಕ್ಷಿ ಮತ್ತು ದಾಖಲೆಗಳು**

ಇರುವುದಿಲ್ಲ.

**4) ಮುದ್ದೆ ಮಾಲುಗಳು :**

ಮುದ್ದೆಮಾಲುಗಳು: ಸುಮಾರು 2 ಅಡಿ ಉದ್ದದ ಸ್ಟೀಲ್ ರಾಡ್ ಮತ್ತು ಒಂದು ಕುಡುಗೋಲು

**ಸಹಿ/-**
**( ಶ್ರೀಮತಿ. ರಂಜಿತ. ಎಸ್)**
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.